**ಸಿ.ಸಿ. ನಂಬರಃ 2240/2025**

**ಪಿ. ಡಬ್ಲ್ಯೂಃ 1**

**ಪಾಟೀಸವಾಲುಃ ದಿಃ 04.07.2026 ರಂದು ಆರೋಪಿಯ ಪರವಾಗಿ ಶ್ರೀ ಪಿ.ಎಸ್ ಜಿ . ವಕೀಲರಿಂದಃ**

ನಾನು ಕಳೆದ 11 ವರ್ಷಗಳಿಂದ ಫಿರ್ಯಾದುದಾರ ಸಂಸ್ಥೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಆರೋಪಿಗೆ ನಮ್ಮ ಸಂಸ್ಥೆಯಿಂದ ಸಾಲ ನೀಡಿದ ಬಾಬ್ತು ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಮ್ಮ ಸಂಸ್ಥೆಯ ಪ್ರಧಾನ ಕಚೇರಿ ಮಂಗಳೂರಿನಲ್ಲಿರುತ್ತದೆ. ಭಟ್ಕಳದಲ್ಲಿ ನಮ್ಮ ಸಂಸ್ಥೆಯ ಒಂದೇ ಶಾಖೆ ಇರುತ್ತದೆ. ಫಿರ್ಯಾದುದಾರ ಸಂಸ್ಥೆಯಿಂದ ಪ್ರಕರಣ ನಡೆಸಲು ನನಗೆ ಅಧಿಕಾರ ಪತ್ರ ನೀಡಿರುತ್ತಾರೆ. ಸದ್ರಿ ಅಧಿಕರ ಪತ್ರ ನಮ್ಮ ಫಿರ್ಯಾದುದಾರ ಸಂಸ್ಥೆಯ ಆಡಳಿತ ಮಂಡಳಿ ನೀಡಿರುತ್ತಾರೆ. ಮೂಲ ಅಧಿಕಾರ ಪತ್ರದಲ್ಲಿ ಆಡಳಿತ ಮಂಡಳಿಯ ಸದಸ್ಯರೆಲ್ಲರ ಸಹಿ ಇರುತ್ತದೆ. ಅಂತಹ ಮೂಲ ಅಧಿಕಾರ ಪತ್ರದ ನಕಲು ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಈಗ ನಾನು ನ್ಯಾಯಾಲಯದಲ್ಲಿ ಒಂದು ದಾಖಲೆಯನ್ನು ನೋಡುತ್ತಿದು ಅದು ನಿಪಿ-1 ಆಗಿದ್ದು , ಸದ್ರಿ ದಾಖಲೆಯ ಮೂಲ ಪ್ರತಿ ನಮ್ಮ ಕೇಂದ್ರ ಕಚೇರಿಯಲ್ಲಿರುತ್ತದೆ. ನಿಪಿ-1 ರ ದಾಖಲೆಯಲ್ಲಿ ಆಡಳಿತ ಮಂಡಳಿಯ ಎಲ್ಲ ಸದಸ್ಯರ ಸಹಿ ಇರುವುದಿಲ್ಲ.

ಪ್ರಸ್ತುತ ಪ್ರಕರಣದ ಆರೋಪಿಗೆ ಅವರ ಮನೆಯ ರಿಪೇರಿ ಸಲುವಾಗಿ ವೈಯಕ್ತಿಕ ಸಾಲ ನೀಡಿರುತ್ತೇವೆ. ನಮ್ಮ ಸಂಸ್ಥೆಯಲ್ಲಿ ನೀಡುವ ವೈಯಕ್ತಿಕ ಸಾಲದ ಮಿತಿಯು 2 ಲಕ್ಷ ಆಗಿರುತ್ತದೆ. ಆರೋಪಿಗೆ ನಾವು 85 ಸಾವಿರ ಸಾಲ ನೀಡಿರುತ್ತೇವೆ. ಆರೋಪಿಗೆ ನಾವು ಸಾಲ ನೀಡುವಾಗ ಆರೋಪಿಗಯಿಂದ ಆಧಾರ ಕಾರ್ಡ್ , ಪಾನ್ ಕಾರ್ಡ್ , ರೇಷನ್ ಕಾರ್ಡ್ , ಪೋಟೋ ಹಾಗೂ ಎರಡು ಜಾಮೀನುದಾರರನ್ನು ಪಡೆದುಕೊಂಡಿರುತ್ತೇವೆ. ಪ್ರಸ್ತುತ ಪ್ರಕರಣದಲ್ಲಿ ಆರೋಪಿಗೆ ಯಾರು ಜಾಮೀನುದಾರರು ಇರುವುದಿಲ್ಲ. ಮರುಪಾವತಿ ಸಲುವಾಗಿ ಆರೋಪಿಗೆ ನಾವು ನೋಟಿಸನ್ನು ನೀಡಿರುತ್ತೇವೆ. ಅಂತಹ ನೋಟಿಸನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ, ಆದರೆ ಹಾಜರುಪಡಿಸಬಹುದು.

ಆರೋಪಿಯು ನಿಪಿ-2 ರ ದಾಖಲೆಯನ್ನು ದಿಃ 21.05.2025 ರಂದು ನೀಡಿರುತ್ತಾರೆ. ನಿಪಿ-2 ರಲ್ಲಿರುವ ಬರವಣಿಗೆಗೂ ಹಾಗೂ ಆರೋಪಿಯ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರ

ದಾಖಲೆಯಲ್ಲಿರುವ ಹಸ್ತಾಕ್ಷರಕ್ಕೂ ಹಾಗೂ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ಥೆಯಲ್ಲಿ ಸಾಲ ಪಡೆದ ನಂತರ ಇಲ್ಲಿಯವರೆಗೆ ರೂ. 19,653 ಗಳನ್ನು ಪಾವತಿ ಮಾಡಿರುತ್ತಾರೆ. ಆರೋಪಿಯು ನಮ್ಮ ಸಂಸ್ಥೆಯಲ್ಲಿ ಪಡೆದ ಸಾಲ ಸಂಪೂರ್ಣವಾಗಿ ಚುಕ್ತಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ಥೆಯಲ್ಲಿ ಬೇರೆ ಸಾಲದ ಬಾಬ್ತು ಜಾಮೀನುದಾರರಾಗಿದ್ದು , ಸದ್ರಿ ಜಾಮೀನುದಾರರ ನೆಲೆಯಲ್ಲಿ ಪಡೆದುಕೊಂಡಿದ್ದ ಚೆಕ್ ನ್ನು ಪ್ರಸ್ತುತ ಪ್ರಕರಣಕ್ಕೆ ದುರ್ಬಳಕೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣ ನಡೆಸಲು ಅಧಿಕಾರ ಪತ್ರ ನಮ್ಮ ಸಂಸ್ಥೆಯು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಈ ಪ್ರಕರಣ್ಕೆ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಮರುವಿಚಾರಣೆಃ ಇಲ್ಲ.**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿರುತ್ತಾರೆ**

**Sd/-**

**ಸಾಕ್ಷಿಯ ಸಹಿ** **ಹೆಚ್ಚುವರಿ ನ್ಯಾ.ದಂ., ಭಟ್ಕಳ.**